**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
**ಸಿಸಿ ನಂಬರ್ 35/2024**

ಫಿರ್ಯಾದಿ ಸರಕಾರ (ಹಾವೇರಿ ಮಹಿಳಾ ಪೊಲೀಸ ಠಾಣೆ).

ವಿರುದ್ದ

ಆರೋಪಿತರು: **1.** ಅಬ್ದುಲ್‌ಹಮೀದ ತಂದೆ ರಾಜೇಸಾಬ ಗುಳೇದಗುಡ್ಡ
ವಯಾ: **51** ವರ್ಷ , ಉದ್ಯೋಗ: ವ್ಯಾಪಾರ
ಸಾ: ದಾನೇಶ್ವರಿ ನಗರ, ಎ ಬ್ಲಾಕ **6** ನೇ ಮುಖ್ಯರಸ್ತೆ
ಹಾವೇರಿ

**:ದೋಷಾರೋಪಣೆ:**

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಹಾವೇರಿ ಮಹಿಳಾ ಪೊಲೀಸ ಠಾಣಾ ವ್ಯಾಪ್ತಿಯ ಹಾವೇರಿ ದಾನೇಶ್ವರಿ ನಗರದ ಎ ಬ್ಲಾಕಿನ ನಿನ್ನ ನಿವಾಸದಲ್ಲಿ ಪಿರ್ಯಾದಿಗೆ ಸ್ಪೈನಲ್ ಕಾರ್ಡಿನ ಅಪರೇಶನ್ ಆಗಿದ್ದು ಸರಿಯಾಗಿ ಎದ್ದು ಅಡ್ಡಾಡಲು ಬರುವದಿಲ್ಲ. 1 ನೇ ಆರೋಪಿಯಾದ ನೀನು ಕಳೆದ ಒಂದೂವರೆ ವರ್ಷದಿಂದ ಬೆಂಗಳೂರ ಅರ್ಸಿಯಾಅರಬ ಎನ್ನುವ ಇದರಲ್ಲಿಯ 2 ನೇ ಆರೋಪಿಳೊಂದಿಗೆ ಸಂಬಂದ ಇಟ್ಟುಕೊಂಡು ಸದರಿಯವಳೊಂದಿಗೆ ವಿಡಿಯೋ ಕಾಲ್ ಮಾಡಿ ಮಾತನಾಡುತ್ತಾ ಅವಳ ಮತ್ತು ಅವಳ ಮಕ್ಕಳಾದ ಆರೋಪಿ 3 ಮತ್ತು 4 ಹಾಗೂಅ ವಳ ಅಣ್ಣ ಆರೋಪಿ 5 ನೇದವರ ಮಾತು ಕೇಳಿ ಪಿರ್ಯಾದಿಯಾದ ನಿನ್ನ ಹೆಂಡತಿಯ ಬಗ್ಗೆ ಆಗಲಿ ನಿನ್ನ ಮಕ್ಕಳಾದ ಚಾ.ಸಾ-4 ರಿಂದ 6 ಇವರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಪಿರ್ಯಾದಿಗೆ ಹಾಗೂ ನಿನ್ನ ಮಕ್ಕಳಿಗೆ ಹಲ್ಕಟ ಶಬ್ದಗಳಿಂದ ಬೈದು ನೀವು ಮನೆಬಿಟ್ಟು ಹೋಗ್ರಿ ನಾನು ಅರ್ಸಿಯಾಅರಬ ಇವಳೊಂದಿಗೆ ಮದುವೆ ಆಗಿ ಅವಳನ್ನು ಮತ್ತು ಅವಳ ಮಕ್ಕಳಿಗೆ ಇಲ್ಲಿಗೆ ಕರೆದುಕೊಂಡು ಬಂದು ಇಟ್ಟುಕೊಳ್ಳುತ್ತೇನೆ ಅಂತಾ ಪಿರ್ಯಾದಿಗೆ ಮಾನಸಿಕವಾಗಿ ಹಾಗೂ ದೈಹಿಕವಾಗಿ ಕಿರುಕುಳು ನೀಡುತ್ತಾ ಬಂದಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.**498**(ಎ) ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಎರಡನೇಯದಾಗಿ **1** ನೇ ಆರೋಪಿಯಾದ ನೀನು ದಿನಾಂಕಃ **03.12.2023** ರಂದು ರಾತ್ರಿ **10-00** ಘಂಟೆಗೆ **1** ನೇ ಆರೋಪಿಯಾದ ನೀನು ಪಿರ್ಯಾದಿಯೊಂದಿಗೆ ಮಲಗುವ ವಿಚಾರವಾಗಿ ತಂಟೆ ತೆಗೆದು ಜಗಳ ಮಾಡಿದ್ದಲ್ಲದೇ ದಿನಾಂಕಃ **04.12.2023** ರಂದು ಮುಂಜಾನೆ **8-00** ಘಂಟೆಗೆ ಪಿರ್ಯಾದಿಗೆ ಕೈಯಿಂದ ಮೈಕೈಗೆ ಹೊಡೆದಿದ್ದು**,** ಕಾರಣ ಕಾರಣ ಭಾರತೀಯ ದಂಡ ಸಂಹಿತೆ ಕಲಂ**.323** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1 ನೇ ಆರೋಪಿಯಾದ ನೀನು ಪಿರ್ಯಾದಿಗೆ ಮತ್ತು ಚಾ.ಸಾ-4 ರಿಂದ 6 ಇವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**.504** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು 1 ನೇ ಆರೋಪಿಯಾದ ನೀನು ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದಬೈದಾಡಿ ಕೈಯಿಂದಮೈಕೈಗೆಹೊಡೆದು ಕೈಯಿಂದಾಅವಳ ಎದೆಗೆ ಗುದ್ದಿ ಕುತ್ತಿಗೆಗೆ ಹಾಕಿ, ಇವತ್ತ ನಿನ್ನ ಮುಗಿಸಿ ಬಿಡ್ತೇನಿ ಅಂತಾ ಕುತ್ತಿಗೆಗೆ ಕೈ ಹಾಕಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**. 109** ಸಹಕಲಂ **34** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಐದನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ 1 ನೇ ಆರೋಪಿಯಾದ ನೀನು ಚಾ.ಸಾ-4 ರಿಂದ 6 ಇವರಿಗೆ ನೀವೆಲ್ಲಾ ಮನೆಯನ್ನು ಬಿಟ್ಟು ಹೋದರೆ ಒಳ್ಳೇಯದು ಇಲ್ಲಾಂದ್ರೆ ನಿಮ್ಮೆಲ್ಲರಿಗೂ ಬೆಂಕಿ ಹಚ್ಚಿ ಕೊಲ್ಲುತ್ತೇನೆ ಅಂತಾ ಜೀವದ ಬೆದಕರಿಕೆ ಹಾಕಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ**.506** ಸಹಕಲಂ **34** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 06.03.2026

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
**ಸಿಸಿ ನಂಬರ್ 35/2024**
**ದಿನಾಂಕಃ 06.03.2026**

ಫಿರ್ಯಾದಿ ಸರಕಾರ (ಹಾವೇರಿ ಮಹಿಳಾ ಪೊಲೀಸ ಠಾಣೆ).

ವಿರುದ್ಧ

ಆರೋಪಿ **1.** ಅಬ್ದುಲ್‌ಹಮೀದ ತಂದೆ ರಾಜೇಸಾಬ ಗುಳೇದಗುಡ್ಡ
ವಯಾಃ **51** ವರ್ಷ **,** ಉದ್ಯೋಗಃ ವ್ಯಾಪಾರ
ಸಾಃ ದಾನೇಶ್ವರಿ ನಗರ**,** ಎ ಬ್ಲಾಕ **6** ನೇ ಮುಖ್ಯರಸ್ತೆ
ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

ಹಾವೇರಿ.
ದಿಃ 06.03.2026

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿಃ